ಆಳಂಧ ತಾಲ್ಲೂಕಿಗೆ ಹೊಸ ಸಬ್ ಜೈಲ್ ಕಟ್ಟಡದ ಅನುದಾನದ ಬಗ್ಗೆ.

27(164) ಶ್ರೀ. ಸುಭಾಷ್ ಆರ್ ಗುತ್ತೇದಾರ್(ಆಳಂದ್)

ಶ್ರೀ ಉಮೇಶ್ ವಿ. ಕತ್ತಿ (ಮಾನ್ಯ ತೋಟಗಾರಿಕೆ ಹಾಗು ಬಂದಿಖಾನೆ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿರುವ ಉಪ ಬಂದೀಖಾನೆ ಕಟ್ಟಡಕ್ಕೆ ಮಂಜೂರಾಗಿರುವ ಅನುದಾನ ಎಷ್ಟು ಮತ್ತು ಯಾವ ವರ್ಷದಲ್ಲಿ ಬಿಡುಗಡೆಯಾಗಿದೆ?

ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಉಪ ಕಾರಾಗೃಹ ಕಟ್ಟಡ ನಿರ್ಮಾಣಕ್ಕೆ 100 ಲಕ್ಷ ರೂಗಳು ಮಂಜೂರಾಗಿರುತ್ತದೆ ಮತ್ತು ಈ ಹಣವನ್ನು ಡಿ.ಡಿ.ಮೂಲಕ ದಿನಾಂಕ:19.09.2008ರಂದು ಲೋಕೋಪಯೋಗಿ ಇಲಾಖೆಯಲ್ಲಿ ಠೇವಣಿ ಇಡಲಾಗಿದೆ.

ಆ) ಅನುದಾನ ಬಿಡುಗಡೆಯಾಗಿದ್ದಲ್ಲಿ ಇವರೆವಿಗೂ ಕಾಮಗಾರಿ ಪ್ರಾರಂಭಿಸಲು ವಿಳಂಬವಾಗಲು ಕಾರಣಗಳೇನು (ವಿವರಗಳನ್ನು ನೀಡುವುದು)

ಮುಖ್ಯ ಅಭಿಯಂತರರು ಸಂಪರ್ಕ ಮತ್ತು ಕಟ್ಟಡಗಳು; ಧಾರವಾಡ, ಇವರು ತಯಾರಿಸಿದ ಕಟ್ಟಡದ ನೀಲಿ ನಕ್ಷೆಯಲ್ಲಿ ಕೆಲವೊಂದು ಬದಲಾವಣೆ ಆಗಬೇಕಿದ್ದ ಕಾರಣ, ಈ ಸಂಬಂಧದಲ್ಲಿ 3–4 ಸಭೆಗಳನ್ನು ಏರ್ಪಡಿಸಿ ಅಂತಿಮ ತೀರ್ಮಾನ ಕೈಗೊಂಡ ಕಾರಣ ಕಾಮಗಾರಿ ಪ್ರಾರಂಭ ಮಾಡಲು ವಿಳಂಬವಾಗಿದೆ.

ಇ) ಕಟ್ಟಡ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸುವುದೇ?

ಈ) ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು?

ಬರುವ ವರ್ಷದೊಳಗಾಗಿ ಕಟ್ಟಡ ನಿರ್ಮಾಣದ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಸುಭಾಷ್ ಆರ್.ಗುತ್ತೇದಾರ್: ಉತ್ತರವನ್ನು ಒದಗಿಸಿದ್ದಾರೆ, ಆದರೆ ಹಣ ಇಟ್ಟು ಸುಮಾರು 10 ತಿಂಗಳಾಯಿತು, ಇದಕ್ಕೆ 100 ಲಕ್ಷರೂ.ಗಳನ್ನು ಇಟ್ಟಿದ್ದಾರೆ, ಅದರ ಪ್ರಕಾರ ಲೋಕೋಪಯೋಗಿ ಇಲಾಖೆಯವರಿಗೆ ಹ್ಯಾಂಡ್ ಓವರ್ ಮಾಡಿದ್ದೇವೆಂದು ಹೇಳಿದ್ದಾರೆ. ಸುಮಾರು ಹತ್ತು ತಿಂಗಳಾಯಿತು ಯಾವಾಗ ಟೆಂಡರ್ ಕರೆಯುತ್ತಾರೆ? ಈ 100 ಲಕ್ಷ ರೂ.ಗಳು ಸಾಕಾಗುತ್ತದೆಯೇ? ಯಾವಾಗ ಪೂರ್ಣಗೊಳಿಸುತ್ತಾರೆಂದು ಹೇಳಬೇಕು.

ಶ್ರೀ ಉಮೇಶ್ ವಿ.ಕತ್ತಿ: ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಉಪ ಕಾರಾಗೃಹ ಕಟ್ಟಡ ನಿರ್ಮಾಣಕ್ಕೆ 100 ಲಕ್ಷ ರೂ.ಗಳು ಮಂಜೂರಾಗಿದ್ದು, ಈ ಹಣವನ್ನು ಲೋಕೋಪಯೋಗಿ ಇಲಾಖೆಯಲ್ಲಿ ಠೇವಣಿ ಇಡಲಾಗಿದೆ. ಅದರ ಬಗ್ಗೆ ನೀಲಿ ನಕ್ಷೆಯನ್ನು ಮಾಡಿದಾಗ ಜೈಲಿನ guidelines ಪ್ರಕಾರ ಮಾಡದೇ ಇದ್ದ ಕಾರಣ, ಈ ಸಂಬಂಧದಲ್ಲಿ 3 ಅಥವಾ 4 ಸಭೆಗಳನ್ನು ಏರ್ಪಡಿಸಿ, ಅದು ಡಿಲೇ

ಆಗಿದ್ದು ನಿಜ ಈಗ ಪೂರ್ತಿಯಾಗಿ ನೀಲಿ ನಕ್ಷೆ ತಯಾರಾಗಿದೆ. ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಲಾಗಿದೆ. ಬರುವ ತಿಂಗಳಲ್ಲಿ ಟೆಂಡರ್ ಮಾಡಿ ಬರುವ ವರ್ಷದಲ್ಲಿ ಆ ಕಟ್ಟಡ ನಿರ್ಮಾಣದ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸುವ ವ್ಯವಸ್ಥೆ ಮಾಡುತ್ತೇವೆಂದು ಈ ಸದನಕ್ಕೆ ತಿಳಿಸಲು ಇಚ್ಛೆಪಡುತ್ತೇನೆ.

ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣದ ಬಗ್ಗೆ

29(1) ಶ್ರೀ ಸತ್ಯನಾರಾಯಾಣ ಎಂ(ಚಾಮುಂಡೇಶ್ವರಿ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಶೇ. 50ಕ್ಕಿಂತಲೂ ಹೆಚ್ಚಿನ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಬಂದಿದೆ.

ರಾಜ್ಯದಲ್ಲಿ 54260 ಅಂಗನವಾಡಿ ಕೇಂದ್ರಗಳು ಹಾಗೂ 405 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು 31077 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿದ್ದು ಸ್ವಂತ ಕಟ್ಟಡ ಹೊಂದಿರುತ್ತವೆ. ಅನುದಾನ ಲಭ್ಯತೆಯ ಮೇಲೆ ಹಂತ ಹಂತವಾಗಿ ಕಟ್ಟಡ ನಿರ್ಮಿಸಲಾಗುವುದು.

ಆ) ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕಾಗಿ ಕಾಯ್ದಿರಿಸಲಾದ ಅನುದಾನ ಎಷ್ಟು;

2009–10ನೇ ಸಾಲಿನಲ್ಲಿ, ರಾಜ್ಯ ವಲಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ 4000.00 ಲಕ್ಷಗಳು ಹಾಗೂ ನಬಾರ್ಡ್ ಅಡಿ ರೂ 980 ಲಕ್ಷಗಳು ಹಾಗೂ ಜಿಲ್ಲಾ ವಲಯ ಕಾರ್ಯಕ್ರಮದಡಿ 469.70ಲಕ್ಷ ರೂಗಳ ಅನುದಾನ ನಿಗದಿಪಡಿಸಲಾಗಿದೆ.

ಇ) ಮೈಸೂರು ತಾಲ್ಲೂಕಿಗೆ ಎಷ್ಟು ಅಂಗನವಾಡಿ ಕೇಂದ್ರ ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ;

2009–10ನೇ ಸಾಲಿನಲ್ಲಿ ಜಿಲ್ಲಾ ವಲಯ ಕಾರ್ಯಕ್ರಮದಡಿ ಮೈಸೂರು ಜಿಲ್ಲೆಗೆ ರೂ 25 ಲಕ್ಷ ಒದಗಿಸಿದ್ದು ತಾಲ್ಲೂಕುವಾರು ಕ್ರಿಯಾ ಯೋಜನೆ ಅನುಮೋದನೆಯಾಗಬೇಕಾಗಿದೆ. ನಬಾರ್ಡ್ RIDF XIV ರಲ್ಲಿ 2008–09 ನೇ ಸಾಲಿಗೆ 1 ಅಂಗನವಾಡಿ ಕಟ್ಟಡ ಮಂಜೂರಾಗಿದ್ದು, 2009–10ನೇ ಸಾಲಿನಲ್ಲಿ ನಿರ್ಮಿಸಲಾಗುವುದು. 2006–07 ನೇ ಸಾಲಿನಿಂದ ಇಲಾಖೆ ಅನುದಾನದಲ್ಲಿ 12 ಕಟ್ಟಡಗಳನ್ನು, RIDF XIIರಲ್ಲಿ 4 ಕಟ್ಟಡಗಳನ್ನು, ಮತ್ತು RIDF XIII ರಲ್ಲಿ 1 ಕಟ್ಟಡದ ನಿರ್ಮಾಣವನ್ನು ತೆಗೆದುಕೊಳ್ಳಲಾಗಿದೆ.